# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ನೇಮಕಾತಿ ಅಧಿಸೂಚನೆ

**ಸಂಖ್ಯೆ: ಕವಿಪ್ರನಿನಿ/ಬಿ16/40342/2016-17** **ದಿನಾಂಕ: 08.08.2016**

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಲ್ಲಿ ಕಿರಿಯ ಸ್ಟೇಷನ್ ಪರಿಚಾರಕ/ಕಿರಿಯ ಮಾರ್ಗದಾಳು ಹುದ್ದೆಗಳ ಹಾಗೂ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕಿರಿಯ ಮಾರ್ಗದಾಳು ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ದಿನಾಂಕ: 21.07.2016 ರ ಉದ್ಯೋಗ ಪ್ರಕಟಣೆಗನುಗುಣವಾಗಿ ಹುದ್ದೆಗಳ ವರ್ಗೀಕರಣ (ಒಟ್ಟು ಹುದ್ದೆಗಳು 6262), ಮೀಸಲಾತಿ ವಿವರ, ವಯಸ್ಸು, ಸಂಭಾವನೆ, ಅರ್ಹತೆ, ಅರ್ಜಿ ಸಲ್ಲಿಸುವಿಕೆಯ ದಿನಾಂಕ ಮತ್ತು ಇತರೆ ವಿವರಗಳು ಕವಿಪ್ರನಿನಿ ಹಾಗೂ ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಗಳ ಈ ಕೆಳಕಂಡ ವೆಬ್‌ಸೈಟ್‌ಗಳಲ್ಲಿ ಲಭ್ಯವಿರುತ್ತದೆ.

| ನಿಗಮ/ಕಂಪನಿಯ ಹೆಸರು | ವೆಬ್‌ಸೈಟ್ | ಸಹಾಯವಾಣಿ ಸಂಖ್ಯೆ |
|---|---|---|
| ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕವಿಪ್ರನಿನಿ) | www.kptcl.com | 080-22211527<br>Ext: 3789, 3872 |
| ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಬೆವಿಕಂ) | www.bescom.org | 080-22085061 |
| ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಹುವಿಸಕಂನಿ) | www.hescom.co.in | 0836-2223865<br>0836-2223867 |
| ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಚಾವಿಸನಿನಿ) | www.cescmysore.org | 0821-2343384 |

ಅಭ್ಯರ್ಥಿಗಳು, ದಿನಾಂಕ: 08.08.2016 ರ ನಂತರ ಮೇಲೆ ತಿಳಿಸಿರುವ ವೆಬ್‌ಸೈಟ್ ಗಳಿಗೆ ಲಾಗ್-ಆನ್ ಮಾಡುವುದರೊಂದಿಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಅರ್ಜಿಯನ್ನು ಸಲ್ಲಿಸಲು ದಿನಾಂಕ: 25.08.2016 ಕೊನೆಯ ದಿನವಾಗಿರುತ್ತದೆ. ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಾಗ, ಸಂದೇಹ ಉಂಟಾದಲ್ಲಿ, ಅರ್ಜಿ ಸಲ್ಲಿಸುವ ಕಂಪನಿಗೆ ಸಂಬಂಧಿಸಿದ ಮೇಲ್ಕಂಡ ಸಹಾಯವಾಣಿ ಸಂಖ್ಯೆಗೆ ಕಚೇರಿ ವೇಳೆಯಲ್ಲಿ ಕರೆ ಮಾಡಿ ಮಾಹಿತಿ ಪಡೆಯಬಹುದಾಗಿದೆ.

***ವಿಶೇಷ ಸೂಚನೆ: ದಿನಾಂಕ: 05.08.2016 ರಂದು ತಂತ್ರಾಂಶ ಪರೀಕ್ಷಾ ವೇಳೆಯಲ್ಲಿ ಈಗಾಗಲೇ ಆನ್ ಲೈನ್ ಮೂಲಕ ಅರ್ಜಿಗಳನ್ನು ಭರ್ತಿ ಮಾಡಿರುವುದು ಕಂಡುಬಂದಿದ್ದು, ಸದರಿ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ದಿನಾಂಕ: 08.08.2016 ರ ಮಧ್ಯಾಹ್ನ 3 ಗಂಟೆಯ ನಂತರ, ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗಾಗಿ ಆನ್‌ಲೈನ್ ಮೂಲಕ ಸಲ್ಲಿಸುವ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು.***

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)
ನಿಗಮ ಕಾರ್ಯಾಲಯ, ಕವಿಪ್ರನಿನಿ,
ಕಾವೇರಿ ಭವನ, ಬೆಂಗಳೂರು.